# ಕಪ್ಪೆ ಮತ್ತು ಹಾಡು

■ ಗಣಪತಿ ಬಾಳೆಗದ್ದೆ

ಜಿಟಿಜಿಟಿ ಮಳೆಯಲಿ
ವಟವಟ ಕಪ್ಪೆ
ಹಾಡು ಹೇಳುತ್ತ
ಕುಳಿತಿಹುದು

ಹಾಡಿಗೊ ಥಂಡಿ
ಮಳೆಯಲಿ ಬಂಡಿ
ಓಡಿಸಿ ಮುಂದಕೆ
ಸಾಗಿಹುದು!

ಕತ್ತಲೆ ಕಾಡು
ಕಾಡಲಿ ಹಾಡು
ಕೆಸರಿನ ಹೊಂಡಕೆ
ಬೀಳುವುದು!

ಬಿದ್ದರು ಎದ್ದು
ಕಂಬಳಿ ಹೊದ್ದು
ಸುತ್ತಲು ಪಿಳಿಪಿಳಿ
ನೋಡುವುದು!

ಬಿಳಿಬಿಳಿ ಪಟ್ಟೆ
ಅಯ್ಯೋ, ಕೆಟ್ಟೆ
ಹೆಬ್ಬುಲಿ ಎದುರಲಿ
ನಿಂತಿಹುದು!

ಸಿಕ್ಕರೆ ಕಪ್ಪೆ
ಹಾವಿನ ತಪ್ಪೆ?
ಒಂದೇ ಗುಕ್ಕಿಗೆ
ನುಂಗುವುದು!

■



ಶಶಿಧರ ಹಳೇಮನಿ

# ವೈರಿಗಳ ಮಕ್ಕಳಿಗೂ ಅಂಗಾಂಗ ದಾನ!

■ ಪ್ರಕಾಶ ಎಸ್. ಮನ್ನಂಗಿ

ಅದು 20005 ನೆಯ ಇಸವಿಯ ರಂಜಾನ್ ಹಬ್ಬದ ಸಮಯ. ಆ ಮನೆಗೆ ನೆಂಟರಿಷ್ಟರೆಲ್ಲ ಬಂದು ಸೇರಿದ್ದರು. ಎಲ್ಲೆಲ್ಲೂ ಸಂತಸದ ಹೊನಲು ಹರಿಯುತ್ತಿತ್ತು. ಚಿಕ್ಕ ಬಾಲಕನೊಬ್ಬ ಅತ್ತಿಂದಿತ್ತ ಖುಷಿಯಿಂದ ಓಡಾಡುತ್ತಿದ್ದ. ಬಂದ ನೆಂಟರೊಬ್ಬರು ಅವನನ್ನು ಹತ್ತಿರ ಕರೆದರು.

ಬಾ ಮಗೂ, ನಿನ್ನ ಹೆಸರೇನು? ಎಂದು ಕೇಳಿದರು. ಹನ್ನೆರಡು ವರ್ಷದ ಆ ಹುಡುಗ ನಾಚುತ್ತ ನನ್ನ ಹೆಸರು ಅಹ್ಮದ್ ಇಸ್ಮಾಯಿಲ್ ಖಾತಿಬ್ ಎಂದ.

ಅವರು ಅವನ ಕೈಗೆ ಉಡುಗೊರೆಯೊಂದನ್ನು ಕೊಟ್ಟರು.

ಬಾಲಕ ಕುಣಿದಾಡುತ್ತ ಏನಿದೆ ಇದರಲ್ಲಿ? ಇದು ನನಗೇನಾ? ಎಂದು ಆತುರದಿಂದ ಕೇಳಿದ. ಹೌದು, ಅದನ್ನು ನಿನಗೇ ಕೊಟ್ಟಿದ್ದೇನೆ. ಆ ಬಾಕ್ಸ್ ತೆರೆದುನೋಡು. ಅದರಿಂದ ಆಡಿಕೋ ಎಂದರು. ಬಾಲಕ ಬಾಕ್ಸ್ ಬಿಚ್ಚಿ ನೋಡಿದ ಅದೊಂದು ಆಟಿಕೆಯ ಬಂದೂಕು.

ಅದನ್ನು ಕೈಯಲ್ಲಿ ಹಿಡಿದು ಆಡಿಕೊಳ್ಳಲು ಅಹ್ಮದ್ ಮುಂದಿನ ರಸ್ತೆಗಿಳಿದ.

ಆಗ ಪಾಲೆಸ್ತೈನಿಯರಿಗೂ– ಇಸ್ರೇಲಿಗಳಿಗೂ ಯುದ್ಧ ನಡೆಯುತ್ತಿತ್ತು. ಅಹ್ಮದನ ಮನೆ ಗಲಭೆಗ್ರಸ್ಥ ಪಾಲೆಸ್ತೈನ್ ಪ್ರದೇಶದಲ್ಲಿತ್ತು.

ಇಸ್ರೇಲಿ ಸೈನಿಕರು ದೂರದಿಂದ ಕೈಯಲ್ಲಿ ಬಂದೂಕು ಹಿಡಿದ ಅಹ್ಮದನನ್ನು ಗಮನಿಸಿದರು. ಇವನಾರೋ ಶತ್ರುಗಳ ಕಡೆಯವನಿರಬೇಕು ಎಂದು ಊಹಿಸಿದರು. ತಕ್ಷಣ ಇವನತ್ತ ಗುಂಡು ಹಾರಿಸಿದರು. ತಡವಾಗಲಿಲ್ಲ ಅಹ್ಮದ್ ನೆಲದ ಮೇಲೆ ಕುಸಿದು ಬಿದ್ದ.

ಅವರು ಹತ್ತಿರ ಬಂದು ನೋಡಿದಾಗ ಅವರಿಗೆ ಅದು ಆಟಿಕೆಯ ಬಂದೂಕೆಂದು ಗೊತ್ತಾಯಿತು.

ನಮ್ಮಿಂದ ತಪ್ಪಾಗಿ ಬಿಟ್ಟಿತು. ಇವನನ್ನು ಆಸ್ಪತ್ರೆಗೆ ಸಾಗಿಸೋಣ ಎಂದು ಅವನನ್ನು ಇಸ್ರೇಲಿಗಳ ಆಸ್ಪತ್ರೆಗೆ ಸಾಗಿಸಿದರು. ಅವರಿಂದ ಅಹ್ಮದನನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಕೊನೆಗೆ ನಮ್ಮಿಂದ ತಪ್ಪಾಗಿ ಹೋಗಿದೆ. ಕ್ಷಮಿಸಿ